# ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆ ನಿಯಮಿತ, ಶ್ರೀನಿವಾಸಪುರ, ಚನ್ನರಾಯಪಟ್ಟಣ ತಾಲ್ಲೋಕು, ಹಾಸನ ಜಿಲ್ಲೆ.

## – : ಸಂಕ್ಷಿಪ್ತ ವರದಿ : –.




1. ಸ್ಥಾಪನೆ : ಕಾರ್ಖಾನೆಯ ಸಹಕಾರ ಸಂಘಗಳ ಕಾಯಿದೆಯಡಿ ನೊಂದಣಿ ಸಂಖ್ಯೆ : ಆರ್.ಸಿ.ಎಸ್:2559:7374:16.6.1973 ರಲ್ಲಿ ನೊಂದಣಿಯಾಗಿ,1984ರ ನವೆಂಬರ್ ಮಾಹೆಯಿಂದ ಕಬ್ಬು ನುರಿಸುವಿಕೆ ಪ್ರಾರಂಭವಾಗಿರುತ್ತದೆ.
2. ಆಡಳಿತ ಮಂಡಳಿ : ದಿನಾಂಕ 10.04.2006 ರಿಂದ ಚುನಾಯಿತ ಆಡಳಿತ ಮಂಡಳಿ ಕಾರ್ಯ ನಿರ್ವಹಿಸುತ್ತಿರುತ್ತದೆ.
3. ಪಾಲು ಬಂಡವಾಳ : ಕಾರ್ಖಾನೆಯು ದಿನಾಂಕ 31.03.08 ರ ಅಂತ್ಯಕ್ಕೆ ಈ ಕೆಳಕಂಡಂತೆ ಪಾಲು ಬಂಡವಾಳವನ್ನು ಹೊಂದಿರುತ್ತದೆ.

| ಕ್ರ.ಸ. | ಷೇರುದಾರರ ವಿವರ | ಸದಸ್ಯತ್ವ ಸಂಖ್ಯೆ | ಮೊಬಲಗು ರೂ.ಲಕ್ಷಗಳಲ್ಲಿ |
|---|---|---|---|
| 1. | ಸರ್ಕಾರದ ಷೇರು | 1 | 219.00 |
| 2. | ಸದಸ್ಯರ ಷೇರು | 21453 | 668.18 |
| | ಒಟ್ಟು | 21454 | 887.18 |

4. ನೌಕರರ ವಿವರ : ಕಾರ್ಖಾನೆಯಲ್ಲಿ ಹಾಲಿ ಒಟ್ಟು 502 ನೌಕರರು ಕರ್ತವ್ಯ ನಿರ್ವಹಿಸುತ್ತಿರುತ್ತದೆ.

5. ಕಬ್ಬು ಅರೆಯುವಿಕೆ : ಕಳೆದ 5 ವರ್ಷಗಳಲ್ಲಿ ಕಬ್ಬು ನುರಿಸಿದ ತುಲನಾತ್ಮಕ ವಿವರ.

| ಕ್ರ.ಸ. | ವರ್ಷ | ನುರಿಸಿದ ಕಬ್ಬು (ಎಂ.ಟಿ.ಗಳಲ್ಲಿ ) | ಉತ್ಪಾದಿಸಿದ ಸಕ್ಕರೆ | ಸಕ್ಕರೆ ಇಳುವರಿ (ಶೇಕಡಾವಾರು) |
|---|---|---|---|---|
| 1. | 2002–03 | 252213.511 | 222320 | 8.80 |
| 2. | 2003–04 | 167476.687 | 171940 | 10.12 |
| 3. | 2004–05 | 78325.021 | 62100 | 7.90 |
| 4. | 2005–06 | 154670.282 | 131760 | 8.52 |
| 5. | 2006–07 | 318832.532 | 261990 | 8.20 |

6. ಅಖೈರು ದಾಸ್ತಾನು : ದಿನಾಂಕ 31.03.2008 ಕ್ಕೆ ಸಕ್ಕರೆ ದಾಸ್ತಾನು 29405 ಕ್ವಿಂಟಾಲ್ ಇದ್ದು, ಈ ಸಕ್ಕರೆಯನ್ನು ಮಾರಟ ಮಾಡಲಾಗಿ 31.07.2008 ರ ಅಂತ್ಯಕ್ಕೆ ಸಕ್ಕರೆ ದಾಸ್ತಾನು ಇರುವುದಿಲ್ಲ.

7. ಆರ್ಥಿಕ ಪರಿಸ್ಥಿತಿ : 2003–04, 2004–05 ಮತ್ತು 2005–06 ನೇ ಸಾಲುಗಳಲ್ಲಿ ಕ್ರಮವಾಗಿ ರೂ.12.94, 318.58, 172.09 ಲಾಭ ಗಳಿಸಿದ್ದು, 2006–07 ನೇ ಸಾಲಿನಲ್ಲಿ ರೂ.152.40 ಲಕ್ಷ, 2007–08 ನೇ ಸಾಲಿನಲ್ಲಿ 903.74 ನಷ್ಟ ಅನುಭವಿಸಿ, ದಿನಾಂಕ 31.03.2008 ಕ್ಕೆ ಕಾಖಾನೆಯು ರೂ.1470.00 ಲಕ್ಷ ಕ್ರೋಢೀಕೃತ ನಷ್ಟ ಹೊಂದಿರುತ್ತದೆ.

8. ಪ್ರಮುಖ ಸಮಸ್ಯೆಗಳು :

(1) ಸರ್ಕಾರದ ಸಂಪರ್ಕ ಸಾಲ: ಕಾರ್ಖಾನೆಯು 1979 ನೇ ಸಾಲಿನ ನಿರ್ಮಾಣ ಕಾರ್ಯಕ್ಕಾಗಿ ಕರ್ನಾಟಕ ರಾಜ್ಯ ಸರ್ಕಾರದಿಂದ ರೂ.200.00 ಲಕ್ಷಗಳನ್ನು ಸಂಪರ್ಕ ಸಾಲವನ್ನಾಗಿ ಪಡೆದಿದ್ದು, ಸದರಿ ಸಾಲ ಸರ್ಕಾರಕ್ಕೆ ಪಾವತಿಸಲು ಬಾಕಿ ಇರುತ್ತದೆ. ಸದರಿ ಸಾಲದ ಮೇಲೆ ಪ್ರತಿ ವರ್ಷ ಶೇಕಡ 14 ರ ದರದಲ್ಲಿ ದಿನಾಂಕ 31.03.2008 ರ ಅಂತ್ಯದ ವರೆಗೆ ಒಟ್ಟು ರೂ.801.50 ಲಕ್ಷಗಳನ್ನು ಬಡ್ಡಿ ಕಡೆಗೆ ಕಾಯ್ದಿರಿಸಲಾಗಿದೆ. ಕಾಯ್ದಿರಿಸಲಾದ ಬಡ್ಡಿ ಮತ್ತು ಅಸಲು ಒಟ್ಟು ರು.1001.50 ಲಕ್ಷಗಳನ್ನು ಸರ್ಕಾರಕ್ಕೆ ಪಾವತಿಸಲು ಬಾಕಿ ಇರುತ್ತದೆ.

(2) ಬಡ್ಡಿ ರಹಿತ ಸಾಲ, ಸರ್ಕಾರದಿಂದ : ಕಾರ್ಖಾನೆಯು ಪ್ರಾರಂಭದ 10 ವರ್ಷಗಳಲ್ಲಿ ಸರ್ಕಾರಕ್ಕೆ ಪಾವತಿಸಬೇಕಾದ ಕಬ್ಬು ಖರೀದಿ ತೆರಿಗೆ ರೂ. 52328834.00 ನ್ನು ಸರ್ಕಾರವು ಪುನಃ ಬಡ್ಡಿ ರಹಿತ ಸಾಲವಾಗಿ ಪರಿವರ್ತಿಸುತ್ತಿದ್ದು, ಈ ಸಾಲದ ಪೈಕಿ ಕಾರ್ಖಾನೆಯು ರೂ.18504400.00 ಗಳನ್ನು ಮರುಪಾವತಿಸಿದ್ದು, ರೂ.33824434.00 ಗಳನ್ನು ಸರ್ಕಾರಕ್ಕೆ ಪಾವತಿಸಲು ಬಾಕಿ ಇರುತ್ತದೆ. ಈ ಸಾಲವನ್ನು ನವೆಂಬರ್ 1999 ರೊಳಗೆ ಸರ್ಕಾರಕ್ಕೆ ಮರುಪಾವತಿಸದೇ ಇರುವುದರಿಂದ, ಪಾವತಿಸಲು

ಬಾಕಿ ಇರುವುದರಿಂದ, ಪಾವತಿಸಲು ಬಾಕಿ ಇರುವ ಮೊಬಲಗಿನ ಮೇಲೆ ದಿನಾಂಕ 31.03.2008 ರ ಅಂತ್ಯದವರೆಗೆ ಶೇಕಡಾ 4ರ ದರದಲ್ಲಿ ರೂ.115.78 ಲಕ್ಷಗಳನ್ನು ಸುಸ್ತಿ ಬಡ್ಡಿ ಕಡೆಗೆ ಕಾಯ್ದಿರಿಸಲಾಗಿದೆ. ಮೇಲ್ಕಂಡ ಎರಡೂ ಸಾಲಗಳ ಮೇಲೆ ಕಾಯ್ದಿರಿಸಲಾದ ಬಡ್ಡಿಯನ್ನು ಮನ್ನಾ ಮಾಡಿಕೊಡುವಂತೆಯೂ ಹಾಗೂ ಅಸಲನ್ನು ಷೇರು ಧನವನ್ನಾಗಿ ಪರಿವರ್ತಿಸಿಕೊಡುವಂತೆ ಘನ ಸರ್ಕಾರಕ್ಕೆ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು, ಇವರ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಇವರು ಸದರಿ ಪ್ರಸ್ತಾವನೆಯನ್ನು ಸೂಕ್ತ ಶಿಫಾರಸ್ಸಿನೊಂದಿಗೆ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಕರ್ನಾಟಕ ಸರ್ಕಾರ ರವರಿಗೆ ಸಲ್ಲಿಸಿರುತ್ತಾರೆ. ಕಾರ್ಖಾನೆಯ ಈ ಮನವಿ ರೀತ್ಯ ಘನ ಸರ್ಕಾರವು ಬಡ್ಡಿಯನ್ನು ಮನ್ನಾ ಮಾಡಿ ಅಸಲನ್ನು ಷೇರು ಧನವನ್ನಾಗಿ ಪರಿವರ್ತಿಸಿಕೊಟ್ಟಲ್ಲಿ, ಕಾರ್ಖಾನೆಯ ಕ್ರೋಢೀಕೃತ ನಷ್ಟ ಇಲ್ಲದಂತಾಗಿ ಲಾಭಗಳಿಸಿ, ಷೇರುದಾರರಿಗೆ ಡಿವಿಡೆಂಟ್ ನೀಡಲು ಹಾಗೂ ಕಬ್ಬು ಸರಬರಾಜು ರೈತರುಗಳಿಗೆ ಹೆಚ್ಚಿನ ಸೌಲಭ್ಯ ಒದಗಿಸಲು ಸಾಧ್ಯವಾಗುತ್ತದೆ.

9. ಕಾರ್ಖಾನೆಯ ಸಾಮರ್ಥ್ಯ ವಿಸ್ತರಣೆ :

ಕಾರ್ಖಾನೆಯ ಹಾಲಿ ಇರುವ ಕಬ್ಬು ಅರೆಯುವ ಸಾಮರ್ಥ್ಯ 1250 ಟಿ.ಸಿ.ಡಿ ಯಿಂದ 3500 ಟಿ.ಸಿ.ಡಿ.ಗೆ ವಿಸ್ತರಿಸಿ, ವಿದ್ಯುತ್,ಎಥೆನಾಲ್ ಮತ್ತು ಡಿಸ್ಟಿಲರಿ ಉತ್ಪಾದನಾ ಘಟಕಗಳನ್ನು ಸ್ಥಾಪಿಸುವ ಸಲುವಾಗಿ, ಕಾರ್ಖಾನೆಯನ್ನು ಚಾಮುಂಡೇಶ್ವರಿ ಶುಗರ್ಸ್ ಲಿ., ಇವರಿಗೆ ಎಲ್.ಆರ್.ಓ.ಟಿ. ಆಧಾರದಲ್ಲಿ ದಿನಾಂಕ 26.10.2007 ರಂದು ಗುತ್ತಿಗೆ ನೀಡಲಾಗಿದೆ. ಸದರಿ ಸಂಸ್ಥೆಯವರು ದಿನಾಂಕ 28.11.2007 ರಿಂದ ಕಾರ್ಖಾನೆಯು ಕಬ್ಬು ನುರುಸುವಿಕೆಯನ್ನು ಪ್ರಾರಂಭಿಸಿ ದಿನಾಂಕ 11.06.2008 ಕ್ಕೆ 212609.340 ಮೆಟ್ರಿಕ್ ಟನ್ ಕಬ್ಬು ಅರೆದು 198360 ಕ್ವಿಂಟಾಲ್ ಸಕ್ಕರೆ ಉತ್ಪಾದಿಸಿ ಸರಾಸರಿ ಇಳುವರಿ ಶೇ.9.41 ಇರುತ್ತದೆ.